ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ರಾಮು |
| ತಂದೆ/ಗಂಡನ ಹೆಸರು | :- | ಚಿಕ್ಕಗೂಳಿಗೌಡ |
| ವಯಸ್ಸು | :- | 52 ವರ್ಷ |
| ಉದ್ಯೋಗ | :- | ವ್ಯವಸಾಯ |
| ವಾಸಸ್ಥಳ | :- | ಮಹರ್ನವಮಿ ದೊಡ್ಡಿ |

(ಸಾಕ್ಷಿಗೆ ದಿನಾಂಕಃ02-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ-1 ನನ್ನ ಹೆಂಡತಿ, ಚಾಸಾ-3 ನನ್ನ ಭಾಮೈದುನಾ, ಚಾಸಾ-4 ನನ್ನ ಚಿಕ್ಕ ಮಾವ, ಚಾಸಾ-5 ನನ್ನ ಅಕ್ಕ, ಆರೋಪಿ ನಮ್ಮ ಊರಿನವರು. ಸುಮಾರು 1 ವರೆ ವರ್ಷದ ಹಿಂದೆ ಹರಳಹಳ್ಳಿ ಗ್ರಾಮದ ಸರ್ವೆ ನಂಃ 100/1 ರಲ್ಲಿ 35 ಗುಂಟೆ ಮತ್ತು 100/12 ರಲ್ಲಿ 12 ಗುಂಟೆ ಜಮೀನು ನಮ್ಮದಾಗಿದ್ದು, ಬೆಳಿಗ್ಗೆ 11-0030 ರಿಂದ 11-30 ರ ಸಮಯದಲ್ಲಿ ಸದರಿ ಜಮೀನಿನಲ್ಲಿ ನಾನು ಮತ್ತು ಚಾಸಾ-1 ರವರು ಸೊಪ್ಪು ಕೀಳಲು ಹೋಗಿದ್ದಾಗ, ಆರೋಪಿ, ಪ್ರಸನ್ನ, ಚಂದನ್ ಮತ್ತು ಚೇತನ್ ಎಂಬುವವರು ಬಂದು ಹಲ್ಲೆ ಮಾಡಿ ತೊಂದರೆ ಕೊಟ್ಟಿರುತ್ತಾರೆ. ಚಂದನ್, ಚೇತನ್ ಮತ್ತು ಪ್ರಸನ್ನ ಎಂಬುವವರು ಚಾಸಾ-1 ರವರನ್ನು ಹಿಡಿದು ತಳ್ಳಾಡಿ ಬಟ್ಟೆಯನ್ನು ಹರಿದು ಹಾಕಿದರು ಚಾಸಾ-1 ರವರು ಕೆಳಗೆ ಬಿದ್ದಾಗ ಪ್ರಸನ್ನ ಎಂಬುವವರು ತುಳಿದಿರುತ್ತಾರೆ. ನನ್ನನ್ನು ಆರೋಪಿ, ಪ್ರಸನ್ನ ಮತ್ತು ಚಂದನ್ ರವರು ತಳ್ಳಾಡಿ, ಕಪಾಲಕ್ಕೆ ಹೊಡೆದಿರುತ್ತಾರೆ ಮತ್ತು ಗದ್ದೆಯಿಂದ ಹೊರಗೆ ತಳ್ಳಿರುತ್ತಾರೆ. ನಂತರ ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಮದ್ದೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿ ನಂತರ ಠಾಣೆಗೆ ಬಂದು ದೂರು ದಾಖಲಿಸಿರುತ್ತೇವೆ. ಅದರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಎಂ ಓ -1 ಆರೋಪಿಗಳು ಹರಿದು ಹಾಕಿದ ನೈಟಿ ಆಗಿರುತ್ತದೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿ ಹಲ್ಲೆ ಮಾಡಿದವರಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಶ್ರೀ ಬಿ ಆರ್ ವಕೀಲರವರಿಂದಃ**

ಯಾವಾ ದಿನಾಂಕದಂದು ಗಲಾಟೆಯಾಗಿದೆ ಎಂದು ನನಗೆ ಗೊತ್ತಿಲ್ಲ. ದೂರು ನೀಡಿದ ದಿನಾಂಕ ಗೊತ್ತಿಲ್ಲ. ದೂರನ್ನು ಓದು ಬರಹ ಗೊತ್ತಿರುವ ಬಳಿ ಬರೆಸಿ ನೀಡಿದ್ದೇವೆ ಹೆಸರು ಗೊತ್ತಿಲ್ಲ. ಸದರಿ ದೂರನ್ನು ಬರೆಸಿ ಟೈಪ್ ಮಾಡಿ ಕೊಟ್ಟಿರಬಹುದು ನನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲ ಎನ್ನುತ್ತಾರೆ. ಚಾಸಾ-3 ಮತ್ತು 4 ದುಂಡನಹಳ್ಳಿಯವರು ಎಂದರೆ ಸರಿ. ನಮ್ಮ ಊರು ಮತ್ತು ದುಂಡನಹಳ್ಳಿಯ ನಡುವೆ ಸುಮಾರು 18-20 ಕಿ ಮೀ ಅಂತರವಿದೆ. ಸದರಿಯವರು ಕೂಲಿ ಕೆಲಸ ಮಾಡುತ್ತಾರೋ ಮನೆಯಲ್ಲಿರುತ್ತಾರೋ ನನಗೆ ಗೊತ್ತಿಲ್ಲ. ನಾನು ಚಾಸಾ-1 ರವರಿಗೆ ಹಲ್ಲೆಯಾಗಿದೆ ಬಾ ಎಂದು ಕರೆದಾಗ ಬಂದಿರುತ್ತಾರೆ. ಗಲಾಟೆಯಾದ 1 ಗಂಟೆಯ ನಂತರ ಬಂದಿರುತ್ತಾರೆ. ಆರೋಪಿ, ಚಂದನ್, ಚೇತನ್ ಮತ್ತು ಪ್ರಸನ್ನ ರವರು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಆದ್ದರಿಂದ ಯಾವುದೇ ರಕ್ತಗಾಯವಾಗಿರುವುದಿಲ್ಲ ಕೇವಲ ಮೂಗೇಟು ಆಗಿರುತ್ತದೆ. ನೈಟಿಯು ಹಿಂದೆ ಮುಂದೆ ಹರಿದಿರುತ್ತದೆ ಯಾವಾ ಭಾಗದಲ್ಲಿ ಹರಿದಿದೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ನನ್ನ ಶರ್ಟ್ ಹರಿದಿರುವುದಿಲ್ಲ ಕೇವಲ ಗುಂಡಿ ಕಿತ್ತಿರುತ್ತದೆ. ನನ್ನ ಶರ್ಟ್ ನ್ನು ಪೊಲೀಸರಿಗೆ ನೀಡಿಲ್ಲ. ಆರೋಪಿ ಮತ್ತು ಆತನ ಕುಟುಂಬದವರು ಯಾವುದೇ ಗಲಾಟೆ ಮಾಡಿಲ್ಲದಿದ್ದರೂ ನಾನು ಮತ್ತುನನ್ನ ಹೆಂಡತಿ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಧ್ಯವಾದಲ್ಲಿ ಸಿವಿಲ್ ದಾವೆಗೆ ಸಹಾಯವಾಗಲೀ ಎಂದು ಆರೋಪಿಯನ್ನು ಬೆದರಿಸಲು ಸುಳ್ಳು ಪ್ರಕರಣಗಳನ್ನುಹೂಡುವ ಪ್ರವೃತ್ತಿ ಹೊಂದಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ಹೇಳಿಕೆ ಪಡೆದಿಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು